**OS No.184/2021**
**PW.3**

**ದಿನಾಂಕಃ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ವಾದಿಯು ನಮ್ಮ ದೂರದ ಸಂಬಂಧಿಕರು. ನಮ್ಮ ಅಂಗಡಿಯ ಪಕ್ಕದಲ್ಲಿ ಅವರ ಅಂಗಡಿ ಇರುತ್ತದೆ. ದಾವಾಸ್ವತ್ತು ಅವರದೇ ಎಂದು ಕೋರಿ ದಾವೆಯನ್ನು ವಾದಿಯು ಹೂಡಿರುತ್ತಾರೆ. ದಾವಾಸ್ವತ್ತಿನ ಖಾತಾ ನಂಬರ್ ಗೊತ್ತಿಲ್ಲ. ವಿಸ್ತೀರ್ಣ ಉದ್ದ 27 ಅಡಿ, ಅಗಲ 12 ಇರುತ್ತದೆ. ದಾವಾಸ್ವತ್ತಿನ ಚೆಕ್ಕುಬಂಧಿ ಗೊತ್ತಿಲ್ಲ. ನಾಗಮ್ಮರವರು ವಾದಿಗೆ ಕ್ರಯ ಮಾಡಿಕೊಟ್ಟಿರುತ್ತಾರೆ. ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಕ್ರಯಪತ್ರಕ್ಕೆ ನಾನು ಸಾಕ್ಷಿದಾರರನಾಗಿರುವುದಿಲ್ಲ. ನಾಗಮ್ಮರವರಿಗೆ ಸ್ವತ್ತು ಹೇಗೆ ಬಂದಿತು ಎಂದು ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಖರೀದಿಸಿದವರು ನೋಡಿರುತ್ತಾರೆ. ವಾದಿಯವರು ಖರೀದಿಸಿದ ದಾವಾ ಆಸ್ತಿಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು ಪ್ರಕರಣ ಹಾಗೂ ದಿವಾನಿ ನ್ಯಾಯಾಲಯದಲ್ಲಿ ಒಂದು ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ದಾವಾಸ್ವತ್ತನ್ನು ನೋಡಿರುತ್ತೇನೆ. ದಾವಾಸ್ವತ್ತು ಖಾಲಿ ಇರುತ್ತದೆ ಹಾಗೂ ಹಿಂದಕ್ಕೆ ಒಂದು ಪಾಳು ಮನೆ ಇರುತ್ತದೆ. ವಾದಿಯು ಯಾರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ ಎಂದು ಗೊತ್ತಿಲ್ಲ. ದಾವೆಯನ್ನು 1 ನೇ ಪ್ರತಿವಾದಿಯ ವಿರುದ್ಧ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನಾಗಮ್ಮರವರ ಸೊಸೆಯಾಗಬೇಕೆಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ವಿಭಾಗಕ್ಕಾಗಿ ಪ್ರಸ್ತುತ ದಾವಾಸ್ವತ್ತಿನ ಮೇಲೆಯೂ ಪ್ರಕರಣ ಬಾಕಿ ಇರುತ್ತದೆ ಎಂದರೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವಾಸ್ವತ್ತಿನ ಸ್ವಾಧೀನದಲ್ಲಿ 1 ನೇ ಪ್ರತಿವಾದಿಯವರು ಇರುತ್ತಾರೆ ಎಂದರೆ ಸರಿ. ವಾದಿ ಮತ್ತು ಅವರ ಗಂಡನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**